CLICK HERE TO DOWNLOAD ANNEXURE FOR THIS ANSWER

# ಕರ್ನಾಟಕ ವಿಧಾನ ಪರಿಷತ್

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್.(ವಿಧಾನಸಭಾ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 243 |
| ಉತ್ತರಿಸಬೇಕಾದ ದಿನಾಂಕ | 28.01.2026 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಳೆದ ಎರಡು ವರ್ಷಗಳಲ್ಲಿ ವಿವಿಧ ವಸತಿ ಯೋಜನೆಯ ಅನ್ವಯ ಎಷ್ಟು ಮನೆಗಳನ್ನು ವಿತರಿಸಲಾಗಿದೆ; ಫಲಾನುಭವಿಗಳ ಹೆಸರಿನೊಂದಿಗೆ ಜಿಲ್ಲಾವಾರು ವಿವರ ನೀಡುವುದು ಹಾಗೂ ಎಷ್ಟು ಹಿಂದುಗಳಿಗೆ ಎಷ್ಟು ಅಲ್ಪ ಸಂಖ್ಯಾತರಿಗೆ, ಎಷ್ಟು ಮಹಿಳೆಯರಿಗೆ, ಎಷ್ಟು ತೃತೀಯ ಲಿಂಗಿಗಳಿಗೆ ಮನೆಗಳನ್ನು ವಿತರಿಸಲಾಗಿದೆ ಎಂಬುದರ ಮಾಹಿತಿ ಒದಗಿಸುವುದು;</td><td>ಕಳೆದ 2 ವರ್ಷಗಳಲ್ಲಿ ಅಂದರೆ 2023-24 ಹಾಗೂ 2025-26ನೇ ಸಾಲಿಗೆ ರಾಜ್ಯ ಸರ್ಕಾರದ ವಸತಿ ಯೋಜನೆಗಳಡಿ ಆಯವ್ಯಯದಲ್ಲಿ ಯಾವುದೇ ಹೊಸ ಮನೆಗಳ ಗುರಿಯನ್ನು ಹಂಚಿಕೆ ಮಾಡಿರುವುದಿಲ್ಲ.<br><br>
• ಕೇಂದ್ರ ಪುರಸ್ಕೃತ ಯೋಜನೆಯಾದ ಪಿ.ಎಂ.ಜನಮನ್‌ಯಡಿಯಲ್ಲಿ 2023-24ನೇ ಸಾಲಿಗೆ ಹಾಗೂ ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)ಯಡಿಯಲ್ಲಿ 2024-25ನೇ ಸಾಲಿಗೆ ಮನೆಗಳ ಗುರಿಯನ್ನು ಹಂಚಿಕೆ ಮಾಡಲಾಗಿರುತ್ತದೆ.<br>
• 2024-25 ಮತ್ತು 2025-26ನೇ ಸಾಲಿನ ಮಳೆ/ಅತಿವೃಷ್ಟಿಯಿಂದ ಸಂಪೂರ್ಣ ಹಾನಿಗೊಳಗಾದ ಮನೆಗಳಿಗೆ ದೇವರಾಜು ಅರಸು ವಸತಿ ಯೋಜನೆಯಡಿ ಸಹಾಯಧನ ಪಾವತಿಸಲು ಕ್ರಮವಹಿಸಲಾಗುತ್ತಿದೆ.<br>
• 2016-17 ರಿಂದ 2021-22ನೇ ಸಾಲಿನವರೆಗಿನ ವಿವಿಧ ವಸತಿ ಯೋಜನೆಯಡಿ ಸಾಕಷ್ಟು ಕಾಲಾವಕಾಶ ನೀಡಿದ ನಂತರವೂ ಪ್ರಾರಂಭವಾಗದ ಮನೆಗಳನ್ನು ಹಾಗೂ 2022-23ನೇ ಸಾಲಿಗೆ ಮಂಜೂರಾದ ಮನೆಗಳ ಗುರಿಯಲ್ಲಿ ನಿಗಧಿಪಡಿಸಲು ಬಾಕಿ ಇದ್ದ ಮನೆಗಳ ಗುರಿಯನ್ನು ಹಿಂಪಡೆದು ರದ್ದುಪಡಿಸಿ, 2024-25ನೇ ಸಾಲಿಗೆ ಬಸವ ಮತ್ತು ಅಂಬೇಡ್ಕರ್ ವಸತಿ ಯೋಜನೆಯಡಿ ಮನೆಗಳ ಗುರಿಯನ್ನು ವಿವಿಧ ವಿಧಾನಸಭಾ ಕ್ಷೇತ್ರ/ಗ್ರಾಮ ಪಂಚಾಯತಿಗಳಿಗೆ ಮರು ಹಂಚಿಕೆ ಮಾಡಲಾಗಿರುತ್ತದೆ.<br>
• ನಗರ ಪ್ರದೇಶದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ PMAY(U)-Non-Convergence ರಡಿಯಲ್ಲಿ 2023-24ನೇ ಸಾಲಿಗೆ ಮಂಜೂರು ಮಾಡಲಾಗಿರುತ್ತದೆ.<br>
• ದೇವರಾಜು ಅರಸು ವಸತಿ ಯೋಜನೆಯಡಿ ವಿವಿಧ ಇಲಾಖೆಯಡಿ ಮನೆಗಳನ್ನು ಮಂಜೂರಾತಿ ನೀಡಲಾಗಿರುತ್ತದೆ.<br><br>
ಮೇಲ್ಕಂಡಂತೆ ಹಂಚಿಕೆ ಮಾಡಲಾದ ಮನೆಗಳ ಗುರಿಯಲ್ಲಿ ಮಂಜೂರಾತಿಯಾದ ಮನೆಗಳ ಯೋಜನವಾರು ವಿವರ ಈ ಕೆಳಕಂಡಂತಿದೆ:
<table>
<tr><th>ಯೋಜನೆ</th><th>ಅನುಮೋದನೆಗೊಂಡ ಮನೆಗಳು</th></tr>
<tr><td>ಬಸವ ವಸತಿ ಯೋಜನೆ-(ಮರು ಹಂಚಿಕೆ)</td><td>9913</td></tr>
<tr><td>ಡಾ.ಬಿ. ಆರ್ ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾ) (ಮರು ಹಂಚಿಕೆ)</td><td>3250</td></tr>
<tr><td>ದೇವರಾಜು ಅರಸು ವಸತಿ ಯೋಜನೆ ಗ್ರಾಮೀಣ</td><td>72</td></tr>
<tr><td>ದೇವರಾಜ್ ಅರಸು ವಸತಿ ಯೋಜನೆ ಗ್ರಾಮೀಣ (ಪ್ರವಾಹ ಪೀಡಿತ)</td><td>2664</td></tr>
<tr><td>ದೇವರಾಜು ಅರಸು ವಸತಿ ಯೋಜನೆ ನಗರ (ಪ್ರವಾಹ ಪೀಡಿತ)</td><td>237</td></tr>
<tr><td>PMAY (U)-Non Convergence</td><td>1264</td></tr>
<tr><td>ಪ್ರಧಾನ ಮಂತ್ರಿ ಆವಾಸ್ ಯೋಜನೆ - ಗ್ರಾಮೀಣ</td><td>312040</td></tr>
<tr><td>ಪಿ.ಎಂ. ಜನ್ ಮನ್</td><td>1100</td></tr>
<tr><td>PMAY (Urban) (ತೃತೀಯ ಲಿಂಗದವರಿಗೆ)</td><td>179</td></tr>
<tr><td>ಒಟ್ಟು</td><td>330719</td></tr>
</table>
ಫಲಾನುಭವಿಗಳ ಜಿಲ್ಲಾವಾರು ವಿವರ ಅಡಕ ಮುದ್ರಿಕೆ (CD) ಯಲ್ಲಿ ನೀಡಲಾಗಿದೆ.</td></tr>
<tr><td>ಆ.</td><td>ವಸತಿ ಯೋಜನೆಗಳಲ್ಲಿ ಯಾವ ರೀತಿಯ ಆರ್ಥಿಕ ರಿಯಾಯಿತಿ ಇದೆ; ಸದರಿ ಆರ್ಥಿಕ ರಿಯಾಯಿತಿ ಪಡೆದ ವಸತಿ ಯೋಜನೆಯ ಫಲಾನುಭವಿಗಳ ಜಿಲ್ಲಾವಾರು ವಿವರ ನೀಡುವುದು;</td><td>ವಸತಿ ಯೋಜನೆಗಳಲ್ಲಿ ಅರ್ಹ ಫಲಾನುಭವಿಗಳಿಗೆ ಸರ್ಕಾರವು ನಿಗಧಿಪಡಿಸಲಾಗಿರುವ ಸಹಾಯಧವನ್ನು ನೀಡಲಾಗುತ್ತಿದೆಯೇ ಹೊರತು ಯಾವುದೇ ರೀತಿಯ ಆರ್ಥಿಕ ರಿಯಾಯಿತಿ ಇರುವುದಿಲ್ಲ. ಆದರೆ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ' ನಿರ್ಮಿಸುತ್ತಿರುವ ಫ್ಲಾಟ್ ಗಳಿಗೆ ಸರ್ಕಾರದ ಆದೇಶದಂತೆ 1 ಬಿ.ಹೆಚ್.ಕೆ. ಫ್ಲಾಟ್ ಗಳಿಗೆ ಎಸ್.ಸಿ., ಎಸ್.ಟಿ., ಒ.ಬಿ.ಸಿ., ಹಾಗೂ ಇತರ ವರ್ಗದವರಿಗೆ ನೀಡಲಾಗುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನದ ವಿವರ ಈ ಕೆಳಗಿನಂತಿದೆ.</td></tr>
</table>

| ವರ್ಗ | ಕೇಂದ್ರ ಸರ್ಕಾರದ ಸಹಾಯಧನ (ರೂಗಳಲ್ಲಿ) | ರಾಜ್ಯ ಸರ್ಕಾರದ ಸಹಾಯಧನ (ರೂಗಳಲ್ಲಿ) | ಒಟ್ಟು ಸಹಾಯಧನ (ರೂಗಳಲ್ಲಿ) |
|---|---|---|---|
| ಪ.ಜಾ./ಪ/ಪಂ. | 1,50,000/- | 2,00,000/- | 3,50,000/- |
| ಸಾಮಾನ್ಯ | 1,50,000/- | 1,20,000/- | 2,70,000/- |

2 ಬಿ.ಹೆಚ್.ಕೆ. ಫ್ಲಾಟ್ ಗಳಿಗೆ ಸಂಬಂಧಿಸಿಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವುದೇ ಸಹಾಯಧನ ಇರುವುದಿಲ್ಲ.

ಇ. ವಿವಿಧ ವಸತಿ ಯೋಜನೆಗಳಲ್ಲಿ ಮನೆಗಳಿಗೆ ನಿಗದಿ ಪಡಿಸಿದ ದರವೆಷ್ಟು; ಸದರಿ ದರವನ್ನು ಯಾವ ಮಾನದಂಡದಡಿಯಲ್ಲಿ ನಿಗದಿ ಪಡಿಸಲಾಗುತ್ತದೆ; ಸದರಿ ಯೋಜನೆಗೆ ಎಷ್ಟು ಮೊತ್ತದ ಸಹಾಯಧನ, ಎಷ್ಟು ಮೊತ್ತದ ಸಾಲವನ್ನು ಪ್ರತಿಯೊಂದು ಫಲಾನುಭವಿಗೆ ನೀಡಲಾಗಿದೆ ಎಂಬುದರ ಮಾಹಿತಿ ಒದಗಿಸುವುದು?

ವಿವಿಧ ವಸತಿ ಯೋಜನೆಗಳಲ್ಲಿ ಮನೆಗಳಿಗೆ ಕೇಂದ್ರ/ ರಾಜ್ಯಸರ್ಕಾರದ ಮಾರ್ಗಸೂಚಿ ಪ್ರಕಾರ ನಿಗಧಿಪಡಿಸಲಾಗಿರುತ್ತದೆ ವಿವಿರ ಈ ಕೆಳಗಿನಂತಿದೆ; ಸರ್ಕಾರದಿಂದ ಸದರಿ ಅನುದಾನ ಸಹಾಯಧನವಾಗಿದ್ದು, ಯಾವುದೇ ಸಾಲ ಒಳಗೊಂಡಿರುವುದಿಲ್ಲ.

| ಯೋಜನೆ | ಒಟ್ಟು | | ರಾಜ್ಯ ಸರ್ಕಾರ | | ಕೇಂದ್ರ ಸರ್ಕಾರ | |
|---|---|---|---|---|---|---|
| | ಸಾಮಾನ್ಯ / ಅಲ್ಪ ಸಂಖ್ಯಾತ | ಪ.ಜಾ/ ಪ.ಪಂಗಡ | ಸಾಮಾನ್ಯ / ಅಲ್ಪ ಸಂಖ್ಯಾತ | ಪ.ಜಾ/ ಪ.ಪಂಗಡ | ಸಾಮಾನ್ಯ / ಅಲ್ಪ ಸಂಖ್ಯಾತ | ಪ.ಜಾ/ ಪ.ಪಂಗಡ |
| ಬಸವ ವಸತಿ | 1.20 | - | 1.20 | - | - | - |
| ಡಾ.ಬಿ. ಆರ್ ಅಂಬೇಡ್ಕರ್ (ಗ್ರಾ) | - | 2.00 | - | 2.00 | - | - |
| ದೇವರಾಜು ಅರಸು ವಸತಿ (ಗ್ರಾ & ನ) | 1.20 | 1.50 | 1.20 | 1.50 | - | - |
| ಪ್ರಧಾನ ಮಂತ್ರಿ ಆವಾಸ್– (ಗ್ರಾ) | 1.20 | 1.75 | 0.48 | 1.03 | 0.72 | 0.72 |
| ಪ್ರಧಾನ ಮಂತ್ರಿ ಆವಾಸ್-(ನ) | 2.70 | 3.50 | - | - | 1.50 | 1.50 |
| ವಾಜಪೇಯಿ ನಗರ ವಸತಿ | | | 1.20 | - | - | - |
| ಡಾ.ಬಿ. ಆರ್ ಅಂಬೇಡ್ಕರ್ ನಿವಾಸ್ (ನ) | | | - | 2.00 | - | - |
| ಪಿ.ಎಂ. ಜನ್ ಮನ್ | 0.00 | 2.00 | 0.00 | 0.80 | 0.00 | 1.20 |

ಪ್ರಧಾನ ಮಂತ್ರಿ ಆವಾಸ್ ನಗರ ಯೋಜನೆಯನ್ನು ರಾಜ್ಯ ಸರ್ಕಾರದ ಯೋಜನೆಗಳಾದ ಡಾ.ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ–ನಗರ ಹಾಗೂ ವಾಜಪೇಯಿ ನಗರ ವಸತಿ ಯೋಜನೆಯೊಂದಿಗೆ ಸಂಯೋಜನೆಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದ್ದು, ಕೇಂದ್ರದ ಅನುದಾನ ಸೇರಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರೂ.3.50 ಲಕ್ಷ ಹಾಗೂ ಇತರೆ ವರ್ಗದವರಿಗೆ ರೂ.2.70 ಲಕ್ಷಗಳನ್ನು ನೀಡಲಾಗುತ್ತಿದೆ.

| ಯೋಜನೆ | ಒಟ್ಟು | | NDRF/SDRF | | ದೇವರಾಜ್ ಅರಸು | |
|---|---|---|---|---|---|---|
| | ಸಾ ಮಾನ್ಯ | ಪ.ಜಾ/ ಪ. ಪಂಗಡ | ಸಾ ಮಾನ್ಯ | ಪ.ಜಾ/ ಪ. ಪಂಗಡ | ಸಾ ಮಾನ್ಯ | ಪ.ಜಾ/ ಪ. ಪಂಗಡ |
| ದೇವರಾಜ್ ಅರಸು ವಸತಿ ಯೋಜನೆ (ಪ್ರವಾಹ ಪೀಡಿತ) | 2.40 | 2.70 | 1.20 | 1.20 | 1.20 | 1.50 |

ಸಂಖ್ಯೆ: ವಇ 15 ಹೆಚ್ಎಎಂ 2026

B. [signature]

(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು